ದಿ.22.10.2021ರಂದು ಸಾಕ್ಷಿಯನ್ನು ಮತ್ತೆ ಕರೆಸಿ ಪ್ರಮಾಣಬೋದಿಸಲಾಯ್ತು.

**<u>ಪಾಟೀ ಸವಾಲುಃ 5 ಮತ್ತು 6ನೇ ಆರೋಪಿ ಪರ ವಕೀಲರುಃ</u>**

**<u>ಶ್ರೀ ಎಸ್ ಎಸ್‌ರವರಿಂದ ಃ</u>**

ನಮ್ಮ ಊರಿನಲ್ಲಿ ಮುನಿರಾಜ ಎನ್ನುವವರು ಸುಮಾರು ಹತ್ತು ಜನ ಇದ್ದಾರೆ ಎಂದರೆ ಸರಿ. ಅದೇ ರೀತಿ ವೆಂಕಟಪ್ಪ ಎನ್ನುವವರು 9 ಜನ ಇದ್ದಾರೆ ಎಂದರೆ ಗೊತ್ತಿಲ್ಲ. ನನ್ನ ಪ್ರಕಾರ ಮುನಿರಾಜು ಎನ್ನುವವರು ಇದ್ದಾರೆ ಗೊತ್ತಿಲ್ಲ. ವೆಂಕಟೇಶ ಎನ್ನುವವರು 8 ಜನ ಇದ್ದಾರೆ ಎಂದರೆ ಗೊತ್ತಿಲ್ಲ.

ನಾನು ಆಸ್ಪತ್ರೆಯಿಂದ ಮಾರನೇ ದಿನ ಊರಿಗೆ ಹೋಗಲಿಲ್ಲ ಸ್ಮಶಾನಕ್ಕೆ ಹೋಗಿದ್ದೆನು. ನಮ್ಮ ಊರಿನಿಂದ ಸ್ಮಶಾನಕ್ಕೆ ಎರಡು ಫರ್ಲಾಂಗ್ ದೂರ ಇದೆ. ಸ್ಮಶಾನಕ್ಕೆ ಹೋದಾಗ ಸುಮಾರು 4 ಗಂಟೆಯಾಗಿತ್ತು. ಸತ್ತವರನ್ನು ಮಣ್ಣು ಮಾಡಿ ನಮ್ಮ ಮನೆಗೆ ವಾಪಸ್ಸು ಬಂದಿದ್ದೆವು ಸಮಯ ಗೊತ್ತಿಲ್ಲ. ನಾನು ಮನೆಗೆ ವಾಪಸ್ಸಾದಾಗ ನೆಂಟರಿಷ್ಟರಿಲ್ಲೆರೂ, ನನ್ನ ತಮ್ಮ ನಾರಾಯಣಪ್ಪ ಸೇರಿದ್ದರು ಎಂದರೆ ಸರಿ. ಸುಮಾರು 10-12 ಜನ ಹೊರಗೆ ಕೂತಿದ್ದರು. ಸದರಿ ದಿನ ವಿಶ್ವನಾಥಪುರ ಪೋಲಿಸ್ ಠಾಣೆಯ ಪೋಲಿಸರು ಬಂದಿದ್ದರು. ಪೋಲಿಸರು ಮೃತರಿಗೆ ನಾನು ಯಾವ ರೀತಿಯ ಸಂಬಂಧ ಎಂದು ಆ ದಿನ ವಿಚಾರಿಸಿರಲಿಲ್ಲ. ಪೋಲಿಸರು ಆ ದಿನ ನನ್ನನ್ನು ವಿಚಾರಿಸಿದ್ದರೆ ನಾನು ಘಟನೆಯ ಬಗ್ಗೆ ಹೇಳುತ್ತಿದ್ದೆ ಎಂದರೆ ಸರಿ. ಆ ದಿನ ಪೋಲಿಸರು ನಮ್ಮ ಠಾಣೆಗೆ ಕರೆದುಕೊಂಡು ಹೋಗಿರಲಿಲ್ಲ ನಾಲ್ಕು ದಿನಗಳ ನಂತರ ಹೋಗಿದ್ದೆವು. ನಮ್ಮ ಸಂಬಂಧಿಕರು ಬಂದಿದ್ದರ ಪೈಕಿ ನಾರಾಯಣಸ್ವಾಮಿ ಸಹ ಇದ್ದರು. ನನ್ನ ಸಮಕ್ಷಮದಲ್ಲಿ 10-12 ಜನ ನೆಂಟರಿಷ್ಟರಲ್ಲಿ ಪೋಲಿಸರು ಯಾರನ್ನೂ ಸಹ ವಿಚಾರಿಸಿರಲಿಲ್ಲ.

ಮೃತರನ್ನು ಮಣ್ಣು ಮಾಡಿದ ದಿನ ಮನೆಯಿಂದ ಆಚೆಯೇ ನಾವು ಹಾಗೂ ನಾರಾಯಣಸ್ವಾಮಿ ಇದ್ದೆವು. ನಾವು ಆ ದಿನ ಮನೆಯಲ್ಲಿ ಭಜನೆ ಮಾಡಿರುವುದಿಲ್ಲ. ಮಣ್ಣು ಮಾಡಿದ ಮಾರನೇ ದಿನ ಪೋಲಿಸರು ನಮ್ಮ ಊರಿಗೆ ಬಂದಿರುವುದು ನನಗೆ ಜ್ಞಾಪಕ ಇಲ್ಲ. ಆ ಸಮಯದಲ್ಲಿ ನನ್ನ ತಮ್ಮ ನಾರಾಯಣಸ್ವಾಮಿ ಬೆಂಗಳೂರಿನಲ್ಲಿ ವಾಸವಾಗಿದ್ದರು ಎಂದರೆ ಸರಿ. ಆತ ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದನು ಎಂದರೆ ಗೊತ್ತಿಲ್ಲ. ಆತ ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿ ವಾಸವಾಗಿದ್ದರು ಎಂದರೆ ಗೊತ್ತಿಲ್ಲ ಬೆಂಗಳೂರಿನಲ್ಲಿ ವಾಸವಾಗಿದ್ದರು. ಆತನ ಬೆಂಗಳೂರಿನ ಮನೆಗೆ ನಾನು ಹೋಗಿ ಬರುತ್ತಿರಲಿಲ್ಲ.

ಮಣ್ಣು ಮಾಡಿದ ಮಾರನೇ ದಿನ ನಾರಾಯಣಸ್ವಾಮಿ ಬೆಂಗಳೂರಿಗೆ ಹೋಗಿದ್ದರು ಎಂದರೆ ಸರಿಯಲ್ಲ ಸುಮಾರು 4-5 ದಿನ ಆತ ನಮ್ಮೊಂದಿಗೆ ಇದ್ದರು. ನಾರಾಯಣಸ್ವಾಮಿಗೆ ಕಾರ್ ಇತ್ತು ಆತನೇ ಕಾರನ್ನು ಚಲಾಯಿಸಿ ಬೆಂಗಳೂರಿಗೆ ಹೋಗಿ ಬರುತ್ತಿದ್ದನು. ಘಟನೆ ಸಮಯದಲ್ಲಿ ನಾರಾಯಣಸ್ವಾಮಿ ಬಿಜೆಪಿ ಪಕ್ಷಕ್ಕೆ ಸೇರಿದ್ದರು ಎಂದರೆ ಗೊತ್ತಿಲ್ಲ. ನಾನು ಪೋಲಿಸರ ಬಳಿ ಹೇಳಿಕೆ ನೀಡುವಾಗ ನನ್ನ ತಮ್ಮ ನಾರಾಯಣಸ್ವಾಮಿ ರಿಯಲ್ ಎಸ್ಟೇಟ್ ' ಮಾಡುತ್ತಿದ್ದು ಬಿಜೆಪಿ ಪಕ್ಷದಲ್ಲಿರುತ್ತಾನೆ ಹಾಲಿ ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿ ವಾಸವಾಸವಾಗಿದ್ದು ಆಗಾಗ್ಗೆ ಊರಿಗೆ ಬಂದು ಹೋಗುತ್ತಿರುತ್ತಾನೆ ಎಂದರೆ ನೆನಪಿಲ್ಲ.

ಈ ಹಂತದಲ್ಲಿ ಮೇಲಿನ ಅಂಶವನ್ನು ಆರೋಪಿತರ ಪರವಾಗಿ ಗುರುತಿಸಲು ವಿನಂತಿಸಿದ್ದು ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಯು ಒಪ್ಪಿಕೊಂಡಿಲ್ಲ ನೆನಪಿಲ್ಲ ಎಂದು ಹೇಳಿದ್ದರಿಂದ ಗುರುತಿಸಲು ಬರುವುದಿಲ್ಲ ಎಂದು ತಕರಾರು ಸಲ್ಲಿಸಿದ್ದು ಹೇಳಿಕೆಯು ಪೋಲಿಸರ ಮುಂದೆ ಹೇಳಿದ್ದು ಲಿಖಿತವಾಗಿದ್ದು ನೆನಪಿಲ್ಲ ಎಂದು ಹೇಳಿರುವುದು ನಿರಾಕರಿಸಿದಂತೆ ಆಗಿರುವುದಿಲ್ಲ ಆದ್ದರಿಂದ ಸದರಿ ಅಂಶವನ್ನು ವಿಶೇಷ ಸರ್ಕಾರಿ ಅಭಿಯೋಜಕರ ತಕರಾರಿಗೆ ಒಳಪಟ್ಟು ನಿಡಿ-4 ಎಂದು ಗುರುತು ಮಾಡಲಾಯಿತು.

ಈಗ ಸುಮಾರು 11 ವರ್ಷ ಆಗಿದ್ದರಿಂದ ಪೋಲಿಸರ ಬಳಿ ನೀಡಿದ ಹೇಳಿಕೆಯಲ್ಲಿ ಏನು ಹೇಳಿದ್ದೇನೆ ಎಂದು ಜ್ಞಾಪಕ ಇಲ್ಲ ಎಂದರೆ ಸರಿಯಲ್ಲ.

ಘಟನೆ ಸಮಯದಲ್ಲಿ ನಾನು ಕೂಲಿ ಕೆಲಸಕ್ಕೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ ಮನೆಯಲ್ಲಿ ಇರುತ್ತಿದ್ದೆ. ಹಸುಗಳನ್ನು ಮೇಯಿಸುತ್ತಿದ್ದೆ. 3 ಹಸುಗಳು ಇದ್ದವು. 3 ಹಸುಗಳು ಹಾಲನ್ನು ನೀಡುತ್ತಿದ್ದವು. ತಿಂಡ್ಲುನಲ್ಲಿ ಹಾಲಿನ ಡೈರಿ ಇದೆ. ತಿಂಡ್ಲು ನಮ್ಮ ಊರಿಗೆ ಅಂಟಿಕೊಂಡಂತಿದೆ. ಹಾಲಿನ ಡೈರಿಯಲ್ಲಿ ಹಾಲನ್ನು ಹಾಕಿದ್ದರ ಪ್ರತಿಯಾಗಿ ಚೀಟಿ ಕೊಡುತ್ತಿದ್ದರು. ನಾನು ಹಾಲಿನ ಡೈರಿಗೆ ಬೆಳಗ್ಗೆ 15 ಲೀಟರ್ ಸಂಜೆ 10 ಲೀಟರ್ ಹಾಕುತ್ತಿದ್ದೆನು. ಹಾಲಿನ ಡೈರಿಗೆ ಬೆಳಗ್ಗೆ 4 ಗಂಟೆಗೆ ಹಾಲು ತೆಗೆದುಕೊಂಡು ಹೋಗಿ ಸಂಜೆ 6 ಗಂಟೆ ಸಮಯಕ್ಕೆ ಮನೆಗೆ ವಾಪಸ್ಸಾಗುತ್ತಿದ್ದೆನು. ಸಂಜೆ 4 ಗಂಟೆ ಸಮಯದಲ್ಲಿ ಹಾಲಿನ ಡೈರಿಗೆ ಹೋಗಿ 5 ಗಂಟೆ ಸಮಯಕ್ಕೆ ವಾಪಸ್ಸಾಗುತ್ತಿದ್ದೆನು. ಹಾಲು ಹಾಕಿದ್ದರ ಪ್ರತಿಯಾಗಿ 15 ದಿನಕ್ಕೊಮ್ಮೆ ಹಾಲಿನ ಡೈರಿಯವರು ಹಣ ಕೊಡುತ್ತಾರೆ ಎಂದರೆ ಸರಿ. ಹಾಲಿನಲ್ಲಿ ಕೊಬ್ಬು ಎಷ್ಟು ಇದೆ ಎಂದರೆ ಹಾಲಿನ ಡೈರಿಯವರು ನೊಂದು ಮಾಡುಕೊಳ್ಳುತ್ತಾರೆ ಹಾಲಿನಲ್ಲಿರುವ ಕೊಬ್ಬಿನ ಅಂಶದ ಮೇಲೆ ದರ ನಿಗದಿ ಮಾಡುತ್ತಾರೆ ಎಂದರೆ ಗೊತ್ತಿಲ್ಲ ನಾನು ಹಾಲು ಹಾಕಿ ಬಂದುಬಿಡುತ್ತೇನೆ ಚೀಟಿ ಕೊಡುತ್ತಾರೆ. ಹಸುಗಳಿಗೆ ನೀಡಲು ಬುಸಾವನ್ನು ಸಾಲ ರೂಪದಲ್ಲಿ ಕೊಡುತ್ತಾರೆ ಎಂದರೆ ಸರಿ. ಬುಸಾಗೆ ನೀಡಿದ ಸಾಲದ ಮೊತ್ತವನ್ನುಕಡಿತ ಮಾಡಿ ಉಳಿದ ಹಾಲಿನ ಹಣವನ್ನು ನೀಡುತ್ತಾರೆ ಎಂದರೆ ಸರಿ. ಹಾಲು ಹಾಕುವವರು ಹಾಲಿನ ಡೈರಿಗೆ ಷೇರುದಾರರು ಎಂದರೆ ಸರಿ. ಹಾಲು ಹಾಕಿರುವ ಚೀಟಿ ನೋಡದೇ ಯಾವ ದಿನ ಹಾಲನ್ನು ಹಾಕುವುದನ್ನು ತಪ್ಪಿಸಿದ್ದೆನು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ.

ಘಟನೆಯ ದಿನ ಬೆಳಗಿನ ಜಾವ 4 ಗಂಟೆಗೆ ಹಾಲನ್ನು ಹಾಕಿ 6 ಗಂಟೆಗೆ ವಾಪಸ್ಸು ಬಂದಿದ್ದೆನು. ಆ ಸಮಯದಲ್ಲಿ ಹಾಲಿನ ಡೈರಿಯ ಅಧ್ಯಕ್ಷರು, ಕಾರ್ಯದರ್ಶಿ, ಹಾಲಿನ ಫ್ಯಾಟ್ ಅಳತೆ ಮಾಡುವವರ ಹೆಸರು ಗೊತ್ತಿಲ್ಲ. ಡೈರಿಯವರು ಹಾಲನ್ನು ಪೂರೈಸಿರುವ ಕುರಿತಂತೆ ಪ್ರತ್ಯೇಕ ಬುಕ್ ಅನ್ನು ಕೊಡುತ್ತಾರೆ ಅದರಲ್ಲಿ ಹಾಲು ಹಾಕಿರುವುದರ ಪೂರ್ಣ ವಿವರ ಬರೆದು ಕೊಡುತ್ತಾರೆ ಎಂದರೆ ನನಗೆ ಅವೆಲ್ಲ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಘಟನೆ ನಡೆದ ಮಾರನೇ ದಿನ ನಾನು ಡೈರಿಯಲ್ಲಿ ಹಾಲು ಹಾಕಲು ಹೋಗಿರುವುದಿಲ್ಲ ಆಸ್ಪತ್ರೆಯಲ್ಲಿದೆ. ಘಟನೆ ಮಾರನೇ ದಿನ ಮಣ್ಣು ಮಾಡಿದ ನಂತರ ಹಾಲು ಹಾಕಲು ಹೋಗಿರುವುದಿಲ್ಲ. ಮಣ್ಣು ಮಾಡಿದ ಮಾರನೇ ದಿನ ಆಸ್ಪತ್ರೆಗೆ ಹೋಗಿದ್ದೆ ಸಮಯ ಗೊತ್ತಿಲ್ಲ ಎಷ್ಟು ಘಂಟೆಗೆ ಹೋಗಿದ್ದೆ ಜ್ಞಾಪಕ ಇಲ್ಲ. ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆನು. ವೈದ್ಯರ ಬಳಿ ಚಿಕಿತ್ಸೆ ಪಡೆದುಕೊಂಡಿದ್ದೆನು. ವೈದ್ಯರು ನನ್ನನ್ನು ಸಂಪೂರ್ಣ ಪರೀಕ್ಷೆ ಮಾಡಿದ್ದರು. ವೈದ್ಯರು ನನ್ನ ಗಾಯಗಳಿಗೆ ಔಷದಿ ನೀಡಿದ್ದರು ಎಂದರೆ ಸರಿ. ವಿಶ್ವನಾಥಪುರ ದೊಡ್ಡಬಳ್ಳಾಪುರದ ಡಿವೈಎಸ್‌ಪಿರವರ ವ್ಯಾಪ್ತಿಯಲ್ಲಿ ಬರುತ್ತದೆ. ದೊಡ್ಡಬಳ್ಳಾಪುರದಲ್ಲಿ ಡಿವೈಎಸ್‌ಪಿರವರ ಕಛೇರಿ ಇದೆ. ಆಸ್ಪತ್ರೆಗೆ ಆ ದಿನ ನಾನು ಒಬ್ಬನೇ ಹೋಗಿದ್ದೆನು. ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆಗೆ ಡಿವೈಎಸ್‌ಪಿರವರ ಕಛೇರಿ ದಾಟಿ ಹೋಗಬೇಕು ಎಂದರೆ ನಾನು ಬಸ್ ಸ್ಟಾಪಿನ ಕಡೆಯಿಂದ ಹೋಗಿದ್ದೆನು. ನಮ್ಮ ಊರಿನಿಂದ ತಿಂಡ್ಲುಗೆ ಹೋಗಿ ಆಸ್ಪತ್ರೆಗೆ ಬಸ್ಸಿನಲ್ಲಿ ಹೋಗಿದ್ದೆನು. ತಿಂಡ್ಲುನಿಂದ ದೊಡ್ಡಬಳ್ಳಾಪುರಕ್ಕೆ ಹೋಗುವಾಗ ಡಿವೈಎಸ್‌ಪಿರವರ ಕಛೇರಿ ದಾರಿಯಲ್ಲಿಯೇ ಹೋಗುತ್ತದೆ ಎಂದರೆ ಹೌದು. ನಾನು ಆಸ್ಪತ್ರೆಗೆ ಹೋಗಿ ಬರುವಾಗ ಬಸ್ಸಿನಲ್ಲಿ ಪ್ರಯಾಣಿಸಿದ್ದು ಒಬ್ಬನೇ ಹೋಗಿ ಬಂದಿದ್ದೆ. ನಾನು ಆಸ್ಪತ್ರೆಗೆ ಹೋಗಿ ಬಂದಾಗ ನಾರಾಯಣಸ್ವಾಮಿ ಮನೆಯಲ್ಲಿಯೇ ಇದ್ದರು.

ದೊಡ್ಡಬಳ್ಳಾಪುರದಲ್ಲಿ ಡಿವೈಎಸ್‌ಪಿರವರ ಕಛೇರಿ ಎಲ್ಲಿದೆ ಎಂದು ಗೊತ್ತು ಎಂದರೆ ಡಿವೈಎಸ್‌ಪಿ ಕವೇರಿಗೆ ವಿಶ್ವನಾಥಪುರ ಪೋಲಿಸರು ಕರೆದುಕೊಂಡು ಹೋಗಿದ್ದರು. ಪೋಲಿಸರು ನನ್ನನ್ನು ಊರಿನಿಂದ ದೊಡ್ಡಬಳ್ಳಾಪುರ ಡಿವೈಎಸ್‌ಪಿ ಕಛೇರಿಗೆ ಕರೆದುಕೊಂಡು ಹೋಗಿದ್ದರು. ಮಣ್ಣು ಮಾಡಿದ ನಾಲ್ಕು ದಿನಕ್ಕೆ ಪೋಲಿಸರು ಡಿವೈಎಸ್‌ಪಿರವರ ಕಛೇರಿಗೆ ಕರೆದುಕೊಂಡು ಹೋಗಿದ್ದರು. ನನ್ನನ್ನು ಕರೆದುಕೊಂಡು ಹೋದ ಪೋಲಿಸರು ಹೆಸರು ಗೊತ್ತಿಲ್ಲ. ಪೋಲಿಸರು ನನ್ನನ್ನು ಡಿವೈಎಸ್‌ಪಿ ಕಛೇರಿಗೆ ಕರೆದುಕೊಂಡು ಹೋದಾಗ ನಾರಾಯಣಸ್ವಾಮಿ ಮನೆಯಲ್ಲಿ ಇರಲಿಲ್ಲ. ನಮ್ಮೂರಿನಿಂದ ಪೋಲಿಸರು ಡಿವೈಎಸ್‌ಪಿ ಕಛೇರಿಗೆ ಬಸ್ಸಿನಲ್ಲಿ ಕರೆದುಕೊಂಡು ಹೋಗಿ ವಾಪಸ್ಸು ಕರೆದುಕೊಂಡು ಬಂದು ಬಿಟ್ಟಿದ್ದರು. ಆಗಿನ ಡಿವೈಎಸ್‌ಪಿರವರ ಹೆಸರು ಗೊತ್ತಿಲ್ಲ. ಡಿವೈಎಸ್‌ಪಿರವರು ನನ್ನನ್ನು ವಿಚಾರಿಸಿದ್ದರು ನಾನು ಘಟನೆಯ ಬಗ್ಗೆ ಹೇಳಿದ್ದೆ. ಡಿವೈಎಸ್‌ಪಿರವರ ಬಳಿ ನಾನು ಘಟನೆಯ ಬಗ್ಗೆ ಹೇಳಿದ್ದನ್ನು ಬಿಟ್ಟು ಬೇರೆ ಪೋಲಿಸರಿಗೆ ಹೇಳಿರುವುದಿಲ್ಲ.

ಪೋಲಿಸರು ಎಷ್ಟು ಜನ ನಮ್ಮ ಊರಿಗೆ ಬಂದಿದ್ದರೋ ಗೊತ್ತಿಲ್ಲ. ಇಬ್ಬರು ಪೋಲಿಸರು ಬಂದಿದ್ದರು ಡಿವೈಎಸ್‌ಪಿ ಕಛೇರಿಗೆ ಕರೆದುಕೊಂಡು ಹೋಗಿದ್ದರು. ಪೋಲಿಸರು ಡಿವೈಎಸ್‌ಪಿ ಕಛೇರಿಗೆ ಹೋಗಿ ಹೇಳಿಕೆ ನೀಡಬೇಕು ಎಂದು ಹೇಳಿದ್ದರು ಎಂದರೆ ಸರಿ. ಅವರ ಕೋರಿಕೆಯ ಮೇರೆಗೆ ನಾನು ಕಛೇರಿಗೆ ಹೋಗಿದ್ದೆನು. ಪೋಲಿಸರು ಬಂದು ಕರೆಯದೇ ಇದ್ದರೆ ನಾನೇ ಸ್ವತಃ ಡಿವೈಎಸ್‌ಪಿ ಕಛೇರಿಗೆ ಹೋಗುತ್ತಿರಲಿಲ್ಲ ಎಂದರೆ ಸಾಕ್ಷಿ ಸುಮ್ಮನೇ ನಿಂತು ನಿಧಾನಿಸಿ ನಂತರ ನಾನು ಆಮೇಲೆ ಹೋಗುತ್ತಿದ್ದೆ ಎಂದು ನುಡಿದಿರುತ್ತಾರೆ. ಡಿವೈಎಸ್‌ಪಿರವರ ಬಳಿ ಕೂಲಿ ಕೆಲಸ ಮಾಡುತ್ತೇನೆ ಎಂದು ಬರೆಸಿದ್ದೆ ಎಂದರೆ ನೆನಪಿಲ್ಲ. ಆ ದಿನ ನನ್ನ ಹತ್ತಿರ ಮು.ಮಾ-11ರಿಂದ 13 ರಕ್ತ ಹತ್ತಿದ ಬಟ್ಟೆಗಳು ಇರಲಿಲ್ಲ.

ಸಾಕ್ಷಿಗೆ ನಿಪಿ-3ನ್ನು ತೋರಿಸಿದ್ದು ತನ್ನ ಸಹಿ ನೋಡಿ ಗುರುತಿಸಲು ಕೇಳಿದರೆ ಮೊದಲು ನೋಡಿ ಹೌದು ಎಂದು ನಂತರ ಅದು ಏನೋ ಇದೆ ನನ್ನದು ಎಂದು ಹೇಳಲು ಆಗುವುದಿಲ್ಲ ಈಗ ನೆನಪಿಲ್ಲ ಎಂದು ಹೇಳುತ್ತಾರೆ. ನಿಪಿ-3ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದರೆ ಸರಿ. ಆ ದಿನ ಬರೆದುಕೊಂಡಿದ್ದಾರೆ ಆದರೆ ಏನು ಬರೆದುಕೊಂಡಿದ್ದಾರೆ ನೆನಪಿಲ್ಲ.

ಈ ಹಂತದಲ್ಲಿ ನ್ಯಾಯಾಲಯದ ಅವಧಿ 05.45 ಆಗಿರುವುದರಿಂದ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ ಎಂದು ನುಡಿದಿದ್ದಾರೆ.

(ಮೋಹನ ಬಾಡಗಂಡಿ)
2ನೇ ಅಪರ ಜಿಲ್ಲಾ ಮತ್ತು ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.